# ಡಿಪ್ಲೋಮಾ (ಪಶು ಸಂಗೋಪನೆ)

## ಶೈಕ್ಷಣಿಕ ಮಾಹಿತಿ ಹಾಗೂ ನಿಯಮಾವಳಿಗಳು

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಕಾಯಿದೆ 2004 ರ (ಕರ್ನಾಟಕ ಕಾಯಿದೆ ನಂ 9, 2004) ಪರಿಚ್ಛೇದ 5 ಅ, ಡಿ ಮತ್ತು ಪರಿಚ್ಛೇದ 6 ಸಿ, ಡಿ ರಲ್ಲಿ ನಿಗದಿಪಡಿಸದ ಅಧಿಕಾರದನ್ವಯ ಸರ್ಕಾರಿ ಆದೇಶ (ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 116 ಪಸಸೇ 2011 ದಿನಾಂಕ 14-10-2011) ರಂತೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಡಿಯಲ್ಲಿ 2011-12 ನೇ ಶೈಕ್ಷಣಿಕ ವರ್ಷದಿಂದ ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ಗ್ರಾಮೀಣ ಅಭ್ಯರ್ಥಿಗಳಿಗೆ ಸೀಮಿತವಾಗಿ ಪಶುಸಂಗೋಪನೆಯಲ್ಲಿ 2 ವರ್ಷದ ಡಿಪ್ಲೋಮಾ ಪ್ರಾರಂಭಿಸಲಾಗಿದೆ. ಡಿಪ್ಲೋಮಾ (ಪಶುಸಂಗೋಪನೆ) ಎರಡು ಶೈಕ್ಷಣಿಕ ವರ್ಷದ ಅವಧಿಯಾಗಿದ್ದು ನಾಲ್ಕು ಸೆಮಿಸ್ಟರ್‌ಗಳನ್ನು ಒಳಗೊಂಡಿರುತ್ತದೆ. ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್ ಬೋಧನೆಯು ಕನ್ನಡ ಮಾಧ್ಯಮದಲ್ಲಿರುತ್ತದೆ.

**ಪ್ರವೇಶಕ್ಕೆ ಅರ್ಹತೆ:**

ಡಿಪ್ಲೋಮಾ (ಪಶುಸಂಗೋಪನೆ)ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಕರ್ನಾಟಕದ ನಿವಾಸಿಯಾಗಿದ್ದು ಒಂದರಿಂದ ಹತ್ತನೇ ತರಗತಿಯವರಿಗೆ **ಗ್ರಾಮೀಣ ಪ್ರದೇಶದಲ್ಲಿರುವ ಶಾಲೆಯಲ್ಲಿ ವ್ಯಾಸಂಗ ಮಾಡಿರಬೇಕು** ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

**ಪ್ರವೇಶಕ್ಕೆ ಆಯ್ಕೆ:**

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ವಿಶ್ವವಿದ್ಯಾಲಯವು ನಿಗದಿ ಪಡಿಸುವ ಪ್ರವೇಶ ಸಂಖ್ಯೆಗೆ ಸೀಮಿತವಾಗಿ ಚಾಲ್ತಿಯಲ್ಲಿರುವ ಮೆರಿಟ್ ಹಾಗೂ ರೋಸ್ಟರ್ ಪದ್ಧತಿ ಆಧರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

**ಸೀಟುಗಳ ಮೀಸಲಾತಿ:**

ಕರ್ನಾಟಕ ಸರಕಾರದ ಆದೇಶ ನಂ. ಎಸ್‌ಡಬ್ಲೂಎಲ್/251/ಬಿಸಿಎ/84 ದಿ. 31-1-1995 ರಂತೆ ಹಾಗೂ ಕಾಲಕಾಲಕ್ಕೆ ನಿಗದಿಗೊಳಿಸುವ ಮೀಸಲಾತಿ ಕ್ರಮವನ್ನು ಆಯ್ಕೆಯ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಿಗೆ ಕರ್ನಾಟಕ ಸರಕಾರದ ಆದೇಶದಂತೆ ವರ್ಟಿಕಲ್ ಮೀಸಲಾತಿ ಅನುಸರಿಸಲಾಗುವುದು. ಅಂಗವಿಕಲರಿಗೆ, ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ, ಎನ್.ಸಿ.ಸಿ., ಸ್ಪೋರ್ಟ್ಸ್, ಸ್ಕೌಟ್ಸ್ ಮತ್ತು ಗೈಡ್ಸ್, ಆಂಗ್ಲೋಇಂಡಿಯನ್, ಡಿಫೆನ್ಸ್ ನೌಕರರ ಹಾಗೂ ಎಕ್ಸ್ ಸರ್ವಿಸಮನ್ ಮಕ್ಕಳಿಗೆ ಕರ್ನಾಟಕ ಸರಕಾರದ ನಿಯಮಾವಳಿಗಳಿಗೆ ಒಳಪಟ್ಟು ಹಾರಿಜಾಂಟಲ್ ಮೀಸಲಾತಿ ಅನುಸರಿಸಲಾಗುವುದು.

**ಪ್ರವೇಶ ವಿಧಾನ:**

ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗೆ ನಿಗದಿಪಡಿಸಿದ ಮೀಸಲಾತಿಯಂತೆ ಅಭ್ಯರ್ಥಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಪ್ರಕಾರ ಪ್ರವೇಶ ನೀಡಲಾಗುವುದು.

ಅಭ್ಯರ್ಥಿಗಳ ಪ್ರವೇಶವು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ಅರ್ಜಿಯಲ್ಲಿ ನಮೂದಿಸಿರುವಂತೆ ಎಲ್ಲಾ ವಿವರಗಳನ್ನು ಹಾಗೂ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಮೂಲ ದಾಖಲಾತಿಯ ಪರಿಶೀಲನೆ.

2. ನಿಗದಿಪಡಿಸಿದ ಕೇಂದ್ರಗಳಲ್ಲಿ ಸೀಟುಗಳ ಲಭ್ಯತೆ.
3. ಕೋರ್ಸ್‌ಗೆ ನಿಗದಿಗೊಳಿಸಿದ ಶುಲ್ಕವನ್ನು ನಿರ್ಧಿಷ್ಟ ದಿನಾಂಕದೊಳಗೆ ವಿಶ್ವವಿದ್ಯಾಲಯಕ್ಕೆ ಸಂದಾಯಮಾಡುವುದು.
4. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿದ ಶೈಕ್ಷಣಿಕ ಸಂಸ್ಥೆಯಿಂದ ವರ್ಗಾವಣೆ ಪತ್ರ ಪಡೆದು ಸಲ್ಲಿಸುವುದು.
5. ೧ ರಿಂದ ೧೦ ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿದರ ಕುರಿತಂತೆ ನಿಗದಿತ ಪ್ರಮಾಣ ಪತ್ರ ಸಲ್ಲಿಸುವುದು.
6. ಮೀಸಲಾತಿಗೆ ಒಳಪಟ್ಟ ಸೀಟುಗಳಿಗೆ ಪ್ರವೇಶವನ್ನು ಕಟ್ಟುನಿಟ್ಟಾಗಿ ಆಯಾ ವರ್ಗಗಳಲ್ಲಿನ ಅಭ್ಯರ್ಥಿಗಳನ್ನು ಮೆರಿಟ್ ಆಧಾರದಲ್ಲಿ ಆಯ್ಕೆಮಾಡಿ ಪ್ರವೇಶ ನೀಡಲಾಗುವುದು. ಈ ಮೀಸಲಾತಿ ವರ್ಗಗಳಲ್ಲಿ ಅಭ್ಯರ್ಥಿಗಳ ಕೊರತೆಯಿಂದ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ, ಇಂತಹ ಸೀಟುಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾವಣೆಯಾದವುಗಳೆಂದು ಪರಿಗಣಿಸಿ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ನೀಡಲಾಗುವುದು.